**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**ಸಿ.ಸಿ.ನಂ. 543/2019**

**ದಿನಾಂಕಃ 28.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು ಃ | ಪ್ರತಿಮಾನಾಯ್ಕ | ಚಾಸಾ-8, ಪ್ರಾಸ.-11 |
| ಗಂಡನ ಹೆಸರು ಃ | ಎಸ್ ಪಿ ನಾಯ್ಕ | |
| ವಯಸ್ಸು ಃ | 60 ವರ್ಷ | |
| ಉದ್ಯೋಗ ಃ | ಗೃಹಿಣಿ | |
| ವಾಸ ಃ | ಬೀರೂರು | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ-1 ನನ್ನ ಮಗಳು. ಚಾಸಾ-7 ನನ್ನ ಪತಿ. ಚಾಸಾ-9 ನನ್ನ ಮಗ. ಚಾಸಾ-4 ರಿಂದ 6, ಚಾಸಾ-10 ರಿಂದ 20 ರವರು ನನಗೆ ಗೊತ್ತು. 1 ನೇ ಆರೋಪಿ ನನ್ನ ಅಳಿಯ. 2 ಮತ್ತು 3 ನೇ ಆರೋಪಿತರು 1 ನೇ ಆರೋಪಿಯ ತಂದೆ ತಾಯಿ. ದಿಃ 08.12.2016 ರಂದು ಚಾಸಾ-1 ರವರನ್ನು 1 ನೇ ಆರೋಪಿಯೊಂದಿಗೆ ಮದುವೆ ಮಾಡಿಕೊಟ್ಟಿರುತ್ತೇವೆ. ಮದುವೆ ಮಾತುಕತೆ ಸಮಯದಲ್ಲಿ ಚಾಸಾ-7, 10 ರಿಂದ 13 ರವರು ಹಾಜರಿದ್ದರು. ಮಾತುಕತೆ ಸಮಯದಲ್ಲಿ ಹುಡುಗನಿಗೆ 48 ಗ್ರಾಂ ಕೊರಳಿನ ಚಿನ್ನದ ಸರ, 32 ಗ್ರಾಂ ಬ್ರಾಸ್‌ಲೈಟ್, ಒಂದು ಉಂಗುರ ಹಾಗೂ ಬಟ್ಟೆ ಬರೆ, ಬೆಳ್ಳಿ ತಟ್ಟ, ಬೆಳ್ಳಿ ಚೆಂಬು, 2 ದೀಪದ ಕಂಬ, ಒಂದು ಆರತಿ ತಟ್ಟೆ, ಕುಂಕುಮ ಬಟ್ಟಲು, ಉದ್ದರಣೆ ನೀಡಬೇಕೆಂದು ಮಾತುಕತೆಯಾಗಿರುತ್ತದೆ. ಅದೇ ರೀತಿ ಹುಡುಗಿಗೆ 70 ಗ್ರಾಂ ಚಿನ್ನದ ನೆಕ್ಲೆಸ್, 7 ತೊಲದ 4 ಚಿನ್ನದ ಬಳೆ, 60 ಗ್ರಾಂ ತೂಕದ ಚಿನ್ನದ ಸರ ಹಾಗೂ ಬಟ್ಟೆ ಬರೆಯನ್ನು ನೀಡಬೇಕು ಎಂದು ಮಾತುಕತೆಯಾಗಿತ್ತು. ವರನ ಬೇಡಿಕೆಯಂತೆ ಈ ಎಲ್ಲಾ ಸಾಮಾನುಗಳನ್ನು ನೀಡಿ ಬೆಂಗಳೂರಿನ ಮೀನಾಕ್ಷಿ ಕಲ್ಯಾಣ ಮಂಟಪದಲ್ಲಿ ಅದ್ದೂರಿಯಾಗಿ ಮದುವೆ ಮಾಡಿರುತ್ತೇವೆ. ಮದುವೆ ದಿನ ಚಾಸಾ-1 ರವರನ್ನು 1 ನೇ ಆರೋಪಿಯ ಮನೆಗೆ ಕಳುಹಿಸಿಕೊಟ್ಟಿರುತ್ತೇವೆ. ಮದುವೆಯಾದ 4 ದಿನಗಳ ನಂತರ ನಮ್ಮ ಮನೆಯಲ್ಲಿ ಪೂಜಾ ಕಾರ್ಯಕ್ರಮ ಆಯೋಜಿಸಿದ್ದು ಅದರ ಸಲುವಾಗಿ ಚಾಸಾ-1 ಮತ್ತು ಆರೋಪಿತರು ನಮ್ಮ ಮನೆಗೆ ಬಂದಿರುತ್ತಾರೆ. ಆದಿನ ನಾವು ಅವರನ್ನು ಚೆನ್ನಾಗಿ ಉಪಚರಿಸಿದ್ದರೂ ಸಹ 1 ನೇ ಆರೋಪಿಯು ಚಾಸಾ-1 ರವರಲ್ಲಿ ನಿನ್ನ ತಂದೆಯು ಮದುವೆ ದಿನವೇ ನನಗೆ ಇನ್ನೂ 150 ಗ್ರಾಂ ಹೆಚ್ಚು ಚಿನ್ನ ನೀಡುವುದಾಗಿ ಹೇಳಿದ್ದು ಅದನ್ನು ಇನ್ನೂ ನೀಡಿರುವುದಿಲ್ಲ ಎಂದು ಹೇಳಿರುತ್ತಾರೆ. ನಿಮ್ಮ ತಂದೆಯವರು ನನಗೆ ಸದರಿ 150 ಗ್ರಾಂ ಚಿನ್ನವನ್ನು ನೀಡುತ್ತಾರೋ ಇಲ್ಲವೋ ಎಂದು ಚಾಸಾ-1 ರವರಲ್ಲಿ ಹೇಳಿರುತ್ತಾರೆ. ನನಗೆ ನಿನಗಿಂತ ಬೇರೆ ಹೆಚ್ಚಿನ ಸೌಲಭ್ಯಗಳಿರುವ ಬೇರೆ ಸಂಬಂಧಗಳು ಬಂದಿದ್ದು ಅವರು ಸೈಟು, ಕಾರುಗಳನ್ನು ನೀಡಲು ತಯಾರಿದ್ದರೂ ಸಹ ನೀನು ನಿನ್ನ ತಂದೆ ತಾಯಿಗೆ ಒಬ್ಬಳೇ ಮಗಳಾಗಿರುವ ಕಾರಣ ನಿನ್ನನ್ನು ಮದುವೆಯಾಗಲು ಒಪ್ಪಿರುತ್ತೇನೆ ಎಂದು 1 ನೇ ಆರೋಪಿ ಚಾಸಾ-1 ರವರಲ್ಲಿ ಹೇಳಿರುತ್ತಾರೆ. 150 ಗ್ರಾಂ ಚಿನ್ನವನ್ನು ಕೊಡದೇ ಹೋದ ಪಕ್ಷದಲ್ಲಿ ನಾವುಗಳು ನಿನ್ನನ್ನು ಇಲ್ಲೇ ಬಿಟ್ಟು ಹೋಗುತ್ತೇವೆ ಎಂದು ಆರೋಪಿತರು ಚಾಸಾ-1 ರವರಲ್ಲಿ ಹೇಳಿ ಚಾಸಾ-

1 ರವರನ್ನು ನಮ್ಮ ಮನೆಯಲ್ಲೇ ಬಿಟ್ಟು ಹೋಗಿರುತ್ತಾರೆ. ಈ ವಿಚಾರವನ್ನು ನನ್ನ ಗಂಡನ ಸ್ನೇಹಿತರಾದ ಚಾಸಾ-14 ಮತ್ತು 15 ರವರ ಬಳಿ ತಿಳಿಸಿ ಅವರನ್ನು ಕರೆದುಕೊಂಡು ನನ್ನ ಗಂಡ ಚಾಸಾ-7 ರವರು ಬೆಂಗಳೂರಿನ ಆರೋಪಿತರ ಮನೆಗೆ ಹೋಗಿರುತ್ತಾರೆ. ಅಲ್ಲಿ ಆರೋಪಿತರ ಮನೆಯಲ್ಲಿ ರಾಜಿ ಸಂದಾನ ಮಾಡಿ ಅವರಿಗೆ ತಿಳಿ ಹೇಳಿ ಸುಧಾರಿಸಿಕೊಂಡು ಹೋಗಿ ಎಂದು ರಾಜಿ ಸಂದಾನ ಮಾಡಿ ಬಂದಿರುತ್ತಾರೆ. ಚಾಸಾ-7 ರವರು 1 ನೇ ಆರೋಪಿಗೆ ನನ್ನ ಮನೆಗೆ ಬಂದು ಚಾಸಾ-1 ರವರನ್ನು ಕರೆದುಕೊಂಡು ಹೋಗಿ ಎಂದು ಕೇಳಿಕೊಂಡ ಮೇರೆಗೆ 1 ನೇ ಆರೋಪಿ ಒಪ್ಪಿ ಒಂದು ವಾರದ ಬಳಿಕ ನಮ್ಮ ಮನೆಗೆ ಬಂದು ಚಾಸಾ-1 ರವರನ್ನು ಕರೆದುಕೊಂಡು ಹೋಗಿರುತ್ತಾರೆ. ನಂತರ 2 ತಿಂಗಳುಗಳ ಕಾಲ ಚಾಸಾ-1 ಮತ್ತು ಆರೋಪಿ ಚನ್ನಾಗಿ ಇದ್ದು, ನಂತರದ ದಿನಗಳಲ್ಲಿ 1 ನೇ ಆರೋಪಿಯು ವಿನಾಃಕಾರಣ ಚಾಸಾ-1 ರವರಲ್ಲಿ ನಿನ್ನ ತಂದೆಯವರಿಗೆ ಫೋನ್ ಮಾಡಿ 150 ಗ್ರಾಂ ಚಿನ್ನ ಮತ್ತು ಒಂದು ಕಾರನ್ನು ಕೊಡಿಸುವಂತೆ ಕೇಳುವಂತೆ ಹೇಳಿ ಮಾನಸಿಕ ಮತ್ತು ದೈಹಿಕ ಹಿಂಸೆಯನ್ನು ನೀಡಿರುತ್ತಾರೆ.

1 ನೇ ಆರೋಪಿಯು ಕೆಲಸಕ್ಕೆ ಹೋದಾಗ 2 ನೇ ಆರೋಪಿಯು ಚಾಸಾ-1 ರವರಿಗೆ ನನ್ನ ಮಗ ಹೇಳಿದ ಹಾಗೆ ಕೇಳು ಬೇವರ್ಸಿ, ನಿನ್ನ ತಂದೆಗೆ ಫೋನ್ ಮಾಡಿ ನನ್ನ ಮಗ ಕೇಳಿದ್ದನ್ನು ಕೊಡಿಸು ಎಂದು ಅವ್ಯಾಚ್ಯವಾಗಿ ಬೈಯುತ್ತಿದ್ದರು. 2 ತಿಂಗಳ ನಂತರ ಪುನಃ ಚಾಸಾ-7 ಮತ್ತು 14, 15 ರವರು ಬೆಂಗಳೂರಿಗೆ ಹೋಗಿ ರಾಜಿ ಸಂದಾನ ಮಾಡಿ ಬಂದಿರುತ್ತಾರೆ. ಇದಾದ ನಂತರ ಒಂದು ವಾರ ಆರೋಪಿ ಮತ್ತು ಚಾಸಾ-1 ಅನೂನ್ಯವಾಗಿದ್ದು ತದನಂತರ ಆರೋಪಿತರು ಮತ್ತೆ ಪುನಃ ಕಿರುಕುಳ ನೀಡಲು ಆರಂಭಿಸಿರುತ್ತಾರೆ. ನೀನು ನಿನ್ನ ಮನೆಯಿಂದ ಬಂಗಾರ ಮತ್ತು ಕಾರನ್ನು ತರದೇ ಹೋದಲ್ಲಿ ನನ್ನ ಮಗನಿಗೆ ಇನ್ನೊಂದು ಮದುವೆ ಮಾಡುತ್ತೇನೆ ಬೇವರ್ಸಿ ಎಂದು 2 ನೇ ಆರೋಪಿಯು ಚಾಸಾ-1 ರವರಿಗೆ ಬೈದಿರುತ್ತಾರೆ. 3 ನೇ ಆರೋಪಿ ಚಾಸಾ-1 ರವರ ಸಣ್ಣ ಸಣ್ಣ ತಪ್ಪುಗಳನ್ನು ಕಂಡುಹಿಡಿದು ನಾನು ಹೇಳಿದ ಹಾಗೆ ಕೆಳದೇ ಇದ್ದರೆ ನಿನ್ನ ಕೈ ಕಾಲು ಕಡಿದು ದೇವಸ್ಥಾನದ ಮುಂದೆ ಬಿಕ್ಷೆ ಬೇಡುವಂತೆ ಮಾಡುತ್ತೇವೆ ಎಂದು ಚಾಸಾ-1 ರವರಿಗೆ ಬೆದರಿಕೆ ಹಾಕಿರುತ್ತಾರೆ. ಚಾಸಾ-1 ರವರಿಗೆ 1 ಮತ್ತು 2 ನೇ ಆರೋಪಿತರು ನಾನು ನಿನ್ನನ್ನು ಕೊಲೆ ಮಾಡಲು ಹೇಸುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ.

2017 ಏಪ್ರಿಲ್ ತಿಂಗಳಿನಲ್ಲಿ ಆರೋಪಿತರು ಚಾಸಾ-1 ರವರನ್ನು ವರದಕ್ಷಿಣೆಯಾಗಿ ಕಾರು ಮತ್ತು 150 ಗ್ರಾಂ ಚಿನ್ನವನ್ನು ನೀಡದ ಕಾರಣ ಅವರ ಮನೆಯಿಂದ ಹೊರಗಡೆ ಹಾಕಿರುತ್ತಾರೆ. ಸದರಿ ವಿಚಾರವನ್ನು 1 ನೇ ಆರೋಪಿ ಚಾಸಾ-7 ರವರಿಗೆ ದೂರವಾಣಿ ಕರೆ ಮಾಡಿ ತಿಳಿಸಿದ್ದು, ಚಾಸಾ-9 ರವರು ಬೆಂಗಳೂರಿಗೆ ಹೋಗಿ ನನ್ನ ಮಗಳನ್ನು ಕರೆದುಕೊಂಡು ಬಂದಿರುತ್ತಾರೆ. ನನ್ನ ಮಗಳನ್ನು ಆರೋಪಿತರು ಇವತ್ತಲ್ಲ ನಾಳೆ ಬಂದು ಕರೆದುಕೊಂಡು ಹೋಗಬಹುದೆಂಬ ವಿಶ್ವಾಸದಿಂದ ಒಂದು ವಾರದ ತನಕ ಕಾದರೂ ಆರೋಪಿತರು ಪದೇ ಪದೇ ಚಾಸಾ-1 ರವರಿಗೆ ದೂರವಾಣಿ ಕರೆ ಮಾಡಿ ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಮಾನಸಿಕವಾಗಿ ಕಿರುಕುಳ ನೀಡುತ್ತಿದ್ದರು. ಈ ಸಂಬಂಧ ಚಾಸಾ-1 ರವರು ಆರೋಪಿತರ ವಿರುದ್ದ ಬೀರೂರು ಠಾಣೆಯಲ್ಲಿ ದೂರು ದಾಖಲಿಸಿರುತ್ತಾರೆ. ಘಟನೆಯ ಸಂಬಂಧ ನಾನು ಹೇಳಿಕೆ ನೀಡಿರುತ್ತೇನೆ.

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ( ಆರೋಪಿತರು ಈ ದಿನ ಗೈರುಹಾಜರಾಗಿದ್ದು ಆರೋಪಿತರನ್ನು ಗುರುತಿಸುವ ಬಗ್ಗೆ ಆರೋಪಿತರ ಪರ ವಕೀಲರು ಯಾವುದೇ ತಕರಾರು ಇಲ್ಲಾ ಎಂದು ನುಡಿದಿರುತ್ತಾರೆ )

ಪಾಟೀಸವಾಲುಃ ಸಮಯಕೋರಿದ್ದರಿಂದ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಒ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.